ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ, ಮೈಸೂರು
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ರವರ ಕಛೇರಿ,
ಕಾ.ಮ.ಪಾ.ಉ.ವಿ. ಹುಣಸೂರು
ದೂರವಾಣಿ ಸ್ಥಿರ ಸಂಖ್ಯೆ 08222-252056
ಮೊಬೈಲ್ ಸಂಖ್ಯೆ : 9448994806

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Office of: Assistant Executive Engineer
O & M Sub Division, Hunsur
Web site. www.cescmysore.org
email.aeehunsur@rediffmail.com

C.E.S.C. MYSORE

Company Identity Number (CIN) : U40109KA2004SGC035177

ಕ್ರಮಾಂಕ: ಸಕಾನಿಇ(ವಿ)/ಸನ್ಯ/ಉವಿ/ಹುಣ/23-24/ 1570(A) | ದಿನಾಂಕ: 03/8/2023

ದಿನಾಂಕ 27-06-2023 ರಂದು ಬೆಳಗ್ಗೆ 11.00 ಗಂಟೆಗೆ ಶ್ರೀ . ಶಿವಕುಮಾರ್ ಕೆ.ಬಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನಾ ವೃತ್ತ. ಚಾವಿಸನಿನಿ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಹುಣಸೂರು ಕಾರ್ಯ ಮತ್ತು ಪಾಲನ ಉಪವಿಭಾಗದ ತ್ರೈಮಾಸಿಕ ಗ್ರಾಹಕರ ಸಂಪರ್ಕ ಸಭೆಯ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು

1. ಶ್ರೀ. ಶಿವಕುಮಾರ್ ಕೆ.ಬಿ ರವರು. ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನಾ ವೃತ್ತ ಮೈಸೂರು
2. ಶ್ರೀ ಸಿದ್ದಪ್ಪ ರವರು. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು
3. ಶ್ರೀಮತಿ ಯಶಸ್ವಿನಿ ಆರ್ ಶೇಖರ್. ಪ್ರಭಾರ ಸಹಾಯಕ ಇಂಜಿನಿಯರ್(ತಾ). ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು.
4. ಶ್ರೀ ಪ್ರಶಾಂತ್. ಪ್ರಭಾರ ಹಿರಿಯ ಸಹಾಯಕ. ಕಂದಾಯ ಶಾಖೆ, ಕಾರ್ಯ ಮತ್ತು ಪಾಲನಾ ಉಪ ವಿಭಾಗ ಹುಣಸೂರು.
5. ಶ್ರೀ ಸೋಮಶೇಖರ್. ಸಹಾಯಕ ಇಂಜಿನಿಯರ್(ವಿ). ಪಟ್ಟಣ ಶಾಖೆ ಹುಣಸೂರು.
6. ಶ್ರೀ ರವಿ ಎಸ್. ಪ್ರಭಾರ ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಚಿಲ್ಕುಂದ ಶಾಖೆ.
7. ಶ್ರೀ ಸೈಯಿದ್ ಗೌಸ್. ಕಿರಿಯ ಇಂಜಿನಿಯರ್. ಶಾಖಾಧಿಕಾರಿಗಳು ಗೋವಿಂದನಹಳ್ಳಿ ಶಾಖೆ.
8. ಶ್ರೀ ವಿಜಿಕುಮಾರ್, ಪ್ರಭಾರ ಕಿರಿಯ ಇಂಜಿನಿಯರ್ (ವಿ). ಶಾಖಾಧಿಕಾರಿಗಳು ಹನಗೂಡು ಶಾಖೆ.
9. ಶ್ರೀ .ಸುಕ್ರುತ್ ಎಸ್. ಕಿರಿಯ ಇಂಜಿನಿಯರ್(ಪ್ರಭಾರ). ಶಾಖಾಧಿಕಾರಿಗಳು ಗಾವಡಗೆರೆ ಶಾಖೆ.
10. ಶ್ರೀ ಪ್ರಸನ್ನ ಕುಮಾರ್. ಕಿರಿಯ ಇಂಜಿನಿಯರ್ (ವಿ). ಶಾಖಾಧಿಕಾರಿಗಳು ರತ್ನಪುರಿ ಶಾಖೆ.

ಸಭೆಯಲ್ಲಿ ಉಪಸ್ಥಿತರಿದ್ದಂತಹ ಎಲ್ಲಾ ಅಧಿಕಾರಿಗಳು ಹಾಗೂ ವಿದ್ಯುತ್ ಗ್ರಾಹಕರುಗಳನ್ನು ಸ್ವಾಗತಿಸಿ ಸಭೆ ಪ್ರಾರಂಭಿಸಲಾಯಿತು.

ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದನ್ವಯ ಪ್ರತಿ ತಿಂಗಳ ಮೂರನೆ ಶನಿವಾರದ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆಎಂದು ಸಭೆಗೆ ತಿಳಿಸಿದರು.

ಪು.ತಿ.ನೊ

ಮುಂದುವರೆದು ಪ್ರಸ್ತುತ ಸಭೆಯಲ್ಲಿ ಹಾಜರಿದ್ದ ಗ್ರಾಹಕರಿಂದ ದೂರುಗಳನ್ನು ಸ್ವೀಕರಿಸಲಾಗಿ ಸದರಿ ವಿವರ ಈ ಕೆಳಕಂಡಂತಿದೆ

| ಕ್ರ.ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ಸುರೇಶ್ ಕೊತ್ತೆಗಾಲ | ಹೆಚ್ಚುವರಿ ಪರಿವರ್ತಕವನ್ನು ಅಳವಡಿಸುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಚಿಲ್ಕುಂದ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿರುತ್ತಾರೆ. |
| 2. | ಶ್ರೀ ರಾಜೇಗೌಡ, ವಡ್ಡಂಬಾಳು | ಕಂಬವನ್ನು ಸ್ಥಳಾಂತರಿಸುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿರುತ್ತಾರೆ. |
| 3. | ಶ್ರೀ ನಂದನ್. ತಟ್ಟಕೆರೆ | ಕಂಬವನ್ನು ಬದಲಾಯಿಸಿ ಕೊಡುವ ಬಗ್ಗೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾತನಾಡಿ ಹನಗೋಡು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ತಿಳಿಸಿರುತ್ತಾರೆ. |
| 4. | ಶ್ರೀ ಹರೀಶ್ ಕುಮಾರ್ , ದೊಡ್ಡಹೆಜ್ಜೂರು | 11 ಕೆ.ವಿ ಮಾರ್ಗ ಸ್ಥಳಾಂತರಿಸಲು ಕಂಬವನ್ನು ಸರಿಪಡಿಸು | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಗೋವಿಂದನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಸೂಚಿಸಿದರು. |
| 5 | ಶ್ರೀ ರಂಗಸ್ವಾಮಿ, ಹಬ್ಬನಕುಪ್ಪೆ | ವಾಲಿರುವ ಕಂಬವನ್ನು ಸರಿಪಡಿಸಲು ಕೂರಿರುತ್ತಾರೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಗೋವಿಂದನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ಮಾಡಿ ವರದಿ ನೀಡುವಂತೆ ಸೂಚಿಸಿದರು. |
| 6 | ಶ್ರೀ ಶ್ರೀಧರ್. ಹುಣಸೂರು | ವಾಹಕಗಳಿಗೆ ತಗುಲುವ ಮರದ ರೆಂಬೆಗಳನ್ನು ತೆರವುಗೊಳಿಸಲು ಕೋರಿರುತ್ತಾರೆ | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ತೆರವುಗೊಳಿಸಲು ಸೂಚಿಸಿರುತ್ತಾರೆ. |
| 7 | ಶ್ರೀ ರಾಮೇಗೌಡ . ನೇರಳಕುಪ್ಪೆ | ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ. | ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ). ರವರು ಮಾಹಿತಿ ನೀಡಿದ್ದಾರೆ. |

ಸಭೆಯ ಕೊನೆಯಲ್ಲಿ ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ).ರವರು ವಿದ್ಯುತ್ ಗ್ರಾಹಕರಿಂದ ಕೇಳಿ ಬಂದಂತಹ ದೂರುಗಳು ಹಾಗೂ ಕುಂದು ಕೊರತೆಗಳ ಬಗ್ಗೆ ಸವಿವರವಾಗಿ ಮಾತನಾಡಿ ಸಭೆಯಲ್ಲಿಯೇ ಕೆಲವು ಅಹವಾಲುಗಳಿಗೆ ಸಂಬಂದಿಸಿದಂತೆ ಪರಿಹಾರ ಮಾರ್ಗೋಪಾಯಗಳನ್ನು ಅಧಿಕಾರಿಗಳಿಗೆ ತಿಳಿಸಿ ಹಾಗೂ ಇತರೆ ಅಹವಾಲುಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳು ಸ್ಥಳ ಪರಿಶೀಲಿಸಿ ನಿಯಾಮನುಸಾರ ಕ್ರಮಕೈಗೊಂಡು ತೆಗೆದುಕೊಂಡ ಕ್ರಮದ ಬಗ್ಗೆ ಕಟ್ಟುನಿಟ್ಟಾಗಿ ಅನುಪಾಲನಾ ವರದಿ ನೀಡುವಂತೆ ಸೂಚಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿದ್ಯುತ್ ಗ್ರಾಹಕರಿಗೆ ಧನ್ಯವಾದಗಳನ್ನು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

...ಯಲ್ಲಿ ಹಾಜರಿದ್ದವರ ಸಂಖ್ಯೆ :- 07

...ಖಿಕ ದೂರುಗಳ ಸಂಖ್ಯೆ :- 7

ಪತ್ರ ಲಿಖಿತ ದೂರುಗಳ ಸಂಖ್ಯೆ :- 0

ತಮ್ಮ ವಿಶ್ವಾಸಿ

ಸಹಾಯಕಕಾರ್ಯನಿರ್ವಾಹಕಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನಾ ಉಪ ವಿಭಾಗ
ಚಾವಿಸನಿನಿ., ಹುಣಸೂರು.

ಪ್ರತಿಗಳು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್ (ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ಮೈಸೂರು ವೃತ್ತ ಮೈಸೂರು ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ಕಾರ್ಯ ಮತ್ತು ಪಾಲನ ವಿಭಾಗ, ಹುಣಸೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.